ಬರೆಯುವುದು? ಯಾಕಾದರೂ ಇಲ್ಲಿನ ಕೆಲಸಕ್ಕೆ ಬಂದು ಸೇರಿಕೊಂಡನೋ– ಎಂದು.

ಆದರೆ ಮೈಸೂರಿನಿಂದ ಇಲ್ಲಿಗೆ ಕೆಲಸಕ್ಕೆ ಬಂದು ಸೇರಿಕೊಂಡದ್ದೂ ಆಗಿತ್ತು. ಸಂಸಾರವನ್ನು ಕರೆತಂದುದೂ ಆಗಿತ್ತು. ಎಂಥ ಮುಜುಗರವಾದರೂ ಸಹಿಸಿಕೊಳ್ಳಬೇಕಲ್ಲ.

ನಾನು ಮಾಸ್ತಿಯವರಿಗೆ ಕಾಗದವನ್ನು ಬರೆಯಲಿಲ್ಲ. ಅವರ ಮನೆಗೇ ಹೋದೆ. ಆ ಮಾತು ಈ ಮಾತು ತೆಗೆದು 'ಸಾರ್, ಹೀಗಾಗಿದೆ' ಎಂದೆ. ಹೊಸ ದರಗಳ ವಿಷಯ ತಿಳಿಸಿದೆ.

'ಹುಂ, ಹೌದೇನಪ್ಪ? ಆಗಲಿ ಬಿಡಿ, ಆ ದರದಲ್ಲಿ ನಾನು ಮಾಡಿಸೋಕ್ಕಾಗಲ್ಲ. ತುಂಬಾ ಜಾಸ್ತಿ, ಇನ್ನೇನು ಮಾಡೋದು? ಬೇರೆ ಕಡೆ ಮಾಡಿಸೋಣ' ಎಂದರು ನಿರ್ಲಕ್ಷವಾಗಿ.

ಮುಂದೆ ನಾನು ಸ್ವಂತ ಪ್ರೆಸ್ಸೇ ಪ್ರಾರಂಭಿಸಿದಾಗ, ಮತ್ತೆ ಮಾಸ್ತಿಯವರ ಪುಸ್ತಕಗಳು ನಮ್ಮಲ್ಲಿ ಅಚ್ಚಾಗತೊಡಗಿದವು.

ಆಗ 'ಸಾರ್, ನೀವು ಇಷ್ಟು ದೂರ ಬರಬೇಕಾಗಿಲ್ಲ, ಪ್ರೂಫ್ ಇತ್ಯಾದಿ ನಾನೇ ಎಲ್ಲ ನೋಡಿ ಮಾಡಿಬಿಡ್ತೀನಿ' ಎಂದರೆ 'ಆಯ್ತಪ್ಪ, ಹಾಗೆ ಮಾಡಿ, ಆದರೆ ಪ್ರಿಂಟಾದ ಒಂದೊಂದು ಫಾರ್ಮೂ ಕಳಿಸಿ' ಎಂದು ಬಿಡುತ್ತಾ ಇದ್ದರು.

ಹಾಗೆಯೇ ಇದ್ದಕ್ಕಿದ್ದ ಹಾಗೆ ಒಂದೊಂದು ದಿನ ಅಳಿಯನೊಂದಿಗೆ ಪ್ರೆಸ್ಸಿಗೆ ಅವರು ಬಂದು ಬಿಡುವುದೂ ಉಂಟು. ನಾನು ಗಡಿಬಿಡಿಯಿಂದ ನನ್ನ ಕುರ್ಚಿಯನ್ನು ಬಿಟ್ಟು ಮೇಲೆದ್ದರೆ ಸಾಕು. ನನ್ನ ಭುಜ ಹಿಡಿದು 'ಕುಳಿತುಕೊಳ್ಳಿ, ಕುಳಿತುಕೊಳ್ಳಿ' ಎಂದು ನನ್ನನ್ನು ಕುಳ್ಳಿರಿಸಿ, ಆಮೇಲೆ ತಾವೂ ನನ್ನ ಎದುರಿಗೆ ಕುಳಿತು ಕೊಳ್ಳುತ್ತ ಇದ್ದರು. 'ನಿಮ್ಮ ಪ್ರೆಸ್ಸಿಗೆ ಬಂದ ಮೇಲೆ ಕಾಫಿ, ಹಾಲು ಹೀಗೆ ಏನಾದರೂ ಕುಡಿದೇ ಹೋಗಬೇಕು ಅಂತ ರೂಲ್ಸ್ ಏನಾದರೂ ಮಾಡಿದ್ದೀರೋ?' ಎಂದು ಹೇಳಿ ದೊಡ್ಡದಾಗಿ ನಗುತ್ತ ಇದ್ದರು.

ಅದು ಮಾಸ್ತಿ ನಗೆ. ಮಾಸ್ತಿಯವರದೇ ಒಂದು ವಿಶಿಷ್ಟ ನಗೆ, ಹೃದಯ ತುಂಬಿದ ನಗೆ, ಈ ನಗೆಯ ಪ್ರೀತಿಯನ್ನು ಯಾರಿಂದಲೋ ಎಲ್ಲಿಂದಲೋ ಪಡೆದುಕೊಳ್ಳಲು ಸಾಧ್ಯವಿಲ್ಲದ್ದು.

ಸರಿ, ಅಚ್ಚಾದ ಒಂದು ಫಾರ್ಮ್ ಕೊಟ್ಟರೆ ಹಾಗೆ ಹೀಗೆ ಅದನ್ನು ತಿರುಗಿಸಿ ನೋಡುವರು– ಅಷ್ಟೆ. ಸುಂದರವಾಗಿ ಮುದ್ರಣವಾಗಿದ್ದರೆ ಅವರಿಗೆ ತುಂಬಾ ಸಂತೋಷ. 'ಚೆನ್ನಾಗಿ ಮಾಡಿದ್ದೀರಿ, ಚೆನ್ನಾಗಿ ಮಾಡಿದ್ದೀರಿ' ಎನ್ನುವರು. ತುಂಬಾ ಸಂತೋಷವಾದಾಗ ಎರಡೆರಡು ಸಲ ಹೇಳುವುದು ಮಾಸ್ತಿಯವರ ರೂಢಿ.

ಮಾಸ್ತಿಯವರಿಗೆ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿದ್ದಾಗ, ಡಾಕ್ಟರುಗಳು ಮಾತಾಡಬಾರದು ಎಂದಿದ್ದರೂ, ಒಂದು ದಿನ ನಾನು ಅವರನ್ನು ನೋಡಲು ಹೋಗಿದ್ದಾಗ 'ಹುಂ, ನಿಮ್ಮ ಮಗನಿಗೆ ಕೆಲಸ ಆಗಲಿಲ್ಲ ಅಲ್ಲವೆ?' ಎಂದರು ವ್ಯಥೆಯಿಂದ.

ನನ್ನ ಹಿರಿಯ ಮಗನಿಗೆ ಮಾತಿನ ತೊಡಕು. ಅಂಗವಿಕಲರ ಪಟ್ಟಿಯಲ್ಲಿ, ಉದ್ಯೋಗ ವಿನಿಮಯ ಕೇಂದ್ರದ ಮೂಲಕ, ಇಲ್ಲಿನ ಕೇಂದ್ರ ಸರಕಾರದ ಒಂದು ದೊಡ್ಡ ಕಾರ್ಖಾನೆಗೆ ಅವನಿಂದ ಅರ್ಜಿ ಹಾಕಿಸಿದ್ದೆ. ಆ ಕಾರ್ಖಾನೆಯ ಹಿರಿಯ ಅಧಿಕಾರಿಯ ತಂದೆಯೂ ಮಾಸ್ತಿ ಅವರೂ ಕಾಲೇಜು ಸಹಪಾಠಿಗಳು. ಆದುದರಿಂದ ಆ ಅಧಿಕಾರಿಗೆ ಹೇಳಿ ಮಾಸ್ತಿಯವರು ಶಿಫಾರ್ಸು ಮಾಡಿದ್ದರು.

ಆದರೂ ಅವನಿಗೆ ಆ ಕೆಲಸ ಆಗಲಿಲ್ಲ. ಆಸ್ಪತ್ರೆಯಲ್ಲಿ ಇದ್ದಾಗಲೂ ಈ ಕುರಿತು ಅದರ ಪ್ರಸ್ತಾಪ.

ಮಾಸ್ತಿಯವರ ನಡೆ, ನುಡಿ, ಬರಹ ಮುದ್ರಣ ನೆನಪುಗಳು ಎಲ್ಲವೂ ನೆನಪಿಗೆ ಮಾತುಗಳಲ್ಲಿ ಎಂದೂ ಮರೆಯಲು ಸಾಧ್ಯವಿಲ್ಲದ್ದು.

ಇದು ಮಾಸ್ತಿ, ಕನ್ನಡದ ಆಸ್ತಿ, ಇನ್ನೆಲ್ಲಿಯ ಆಸ್ತಿ?

**(ಅಕ್ಟೋಬರ್, 1998)**